# <u>ಕರ್ನಾಟಕ ವಿಧಾನ ಪರಿಷತ್</u>

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **2069 (2358)** |
| **ಸದಸ್ಯರ ಹೆಸರು** | **ಶ್ರೀ.ಛಲವಾದಿ ಟಿ ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **27.03.2026** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2024-25 ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಗ್ರಾಮೀಣ ಭಾಗದ ರಸ್ತೆ ಸಂಪರ್ಕ ಜಾಲವನ್ನು ವ್ಯವಸ್ಥಿತವಾಗಿ ಹಾಗೂ ಗುಣಾತ್ಮಕವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಪ್ರಗತಿಪಥ ಯೋಜನೆಯನ್ನು ಜಾರಿಗೊಳಿಸುವುದಾಗಿ ಘೋಷಿಸಲಾಗಿದ್ದು, ಪ್ರಸ್ತುತ ಸಾಲಿನಲ್ಲಿ ಅದರ ಅನುಷ್ಠಾನ ಯಾವ ಹಂತದಲ್ಲಿದೆ; | 2024-25 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ಪ್ರಗತಿ ಪಥ ಯೋಜನೆಯಡಿ ಅಭಿವೃದ್ಧಿಪಡಿಸಲು ಒಟ್ಟಾರೆ 1353 ರಸ್ತೆಗಳನ್ನು ಗುರುತಿಸಲಾಗಿದೆ.<br>• ಈ ಪೈಕಿ 293 ರಸ್ತೆಗಳು ಜೈವಿಕ ಸೂಕ್ಷ್ಮ ವಲಯ ಹಾಗೂ ಸಂರಕ್ಷಿತ ಅರಣ್ಯಗಳ ಮೂಲಕ ಹಾದು ಹೋಗುವ ಕಾರಣಗಳಿಂದಾಗಿ ಹೆಚ್ಚುವರಿ ಪರಿಶೀಲನೆ ಅಗತ್ಯವೆಂದು ADB ತಂಡವು ತಿಳಿಸಿದ್ದು, ಇನ್ನುಳಿದ 61 ರಸ್ತೆಗಳನ್ನು ಬೇರೆ ಬೇರೆ ಇಲಾಖೆಯಿಂದ ಕೈಗೆತ್ತಿಕೊಂಡಿರುವುದರಿಂದ ಮತ್ತು ಇತ್ಯಾದಿ ಕಾರಣಗಳಿಂದ ಕೈಬಿಡಬೇಕಾಗಿದ್ದು. ಪ್ರಸ್ತುತ ADB ರವರು ಅನುಮೋದಿಸಿರುವ ಮೇರೆಗೆ 999 ರಸ್ತೆಗಳನ್ನು ಅಂತಿಮಗೊಳಿಸಲಾಗಿದೆ.<br>• ಈ 999 ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲು ಮೊದಲ ಹಂತದಲ್ಲಿ 573 ಕಾಮಗಾರಿಗಳಿಗೆ ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಹಾಗೂ ಉಳಿದ 426 ಕಾಮಗಾರಿಗಳನ್ನು ಎರಡನೇ ಹಂತದಲ್ಲಿ ಕೈಗೆತ್ತಿಕೊಳ್ಳಲು ದಿನಾಂಕ:03.03.2026 ರಂದು ನಡೆದ ರಾಜ್ಯ ಮಟ್ಟದ ಸ್ಥಾಯಿ ಸಮಿತಿ ಸಭೆಯಲ್ಲಿ(SLSC) ಅನುಮೋದನೆ ನೀಡಲಾಗಿರುತ್ತದೆ. |

| | | |
|---|---|---|
| ಆ | ಈ ಯೋಜನೆ ಅಡಿಯಲ್ಲಿ ಹಂಚಿಯಾದ ಅನುದಾನವೆಷ್ಟು; ವಿಧಾನಸಭಾ ಕ್ಷೇತ್ರವಾರು ಆಯ್ಕೆ ಮಾಡಿರುವ ರಸ್ತೆಗಳು ಯಾವುವು; | ಪ್ರಗತಿಪಥ ಯೋಜನೆಯಡಿ 540[illegible]0 ಕಿ.ಮೀ ಉದ್ದದ ಗ್ರಾಮೀಣ ರಸ್ತೆಗಳನ್ನು ರೂ. 3936.06 ಕೋಟಿಗಳಲ್ಲಿ ಅಭಿವೃದ್ಧಿಪಡಿಸಲು ಅನುದಾನ ಹಂಚಿಕೆ ಮಾಡಲಾಗಿರುತ್ತದೆ. 2025-26 ಸಾಲಿನ ಆಯವ್ಯಯದಲ್ಲಿ ರೂ.100.00 ಕೋಟಿಗಳನ್ನು ನಿಗಧಿಪಡಿಸಲಾಗಿರುತ್ತದೆ.<br><br>ಪ್ರಗತಿಪಥ ಯೋಜನೆಯಡಿ ಆಯ್ಕೆ ಮಾಡಿರುವ ರಸ್ತೆಗಳ ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಅನುಬಂಧ-1ರಲ್ಲಿ ಸಲ್ಲಿಸಿದೆ. |
| ಇ) | ಪ್ರಸ್ತುತ ಯೋಜನೆಯು ಯಾವ ಹಂತದಲ್ಲಿದೆ; ಯಾವ ಕಾಲಮಿತಿ ಒಳಗೆ ಪ್ರಾರಂಭಿಸಲಾಗುವುದು? (ವಿವರ ಒದಗಿಸುವುದು); | • ADB ಇಂದ SBD (Standard Bid Document) ಪರಿಶೀಲನೆ ಅಂತಿಮ ಹಂತದಲ್ಲಿದ್ದು, ಅವರಿಂದ ತೀರುವಳಿ ದೊರೆತ ನಂತರ ಅನುಮೋದನೆಯಂತೆ ಟೆಂಡರ್ ಕರೆದು ಗುತ್ತಿಗೆ ವಹಿಸಿದ ನಂತರ ನಿಯಮಾನುಸಾರ ಕಾಮಗಾರಿಗಳನ್ನು ಪ್ರಾರಂಭಿಸಲಾಗುತ್ತದೆ.<br><br>• Aide Memoire ಪ್ರಕಾರ ADB ಯೊಂದಿಗೆ Loan Negotiation ಪ್ರಕ್ರಿಯೆಯನ್ನು Quarter - 3 of year 2026 ರಲ್ಲಿ ಕ್ರಮವಹಿಸಬೇಕಾಗಿದೆ. |

**ಕಡತ ಸಂಖ್ಯೆ:**ಪ್ರಶಾವಿಸ:16ನೇವಿಸ:9ನೇಅ:ಪ್ರ.ಸಂ.2069(2358):2026

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು